
ಭಾಷೆಯ ಮೇಲಿನ ಹಿಡಿತ, ಬಳಸುವ ನುಡಿಗಟ್ಟುಗಳು, ರೂಪಕಗಳ ಸಮಯೋಚಿತ ಬಳಕೆ, ಸರಳ ನಿರೂಪಣೆ, ಇವೆಲ್ಲವೂ ಒಟ್ಟಾರೆಯಾಗಿ ಇದೊಂದು ಸಾಮಾನ್ಯನೂ ಓದಬಹುದಾದ ಸಾಹಿತ್ಯ ಕೃತಿಯಾಗಿ ರೂಪುಗೊಳ್ಳುವಲ್ಲಿ ಸಹಯೋಗ ನೀಡಿವೆ. ಹಾಗೇ, ಪುಸ್ತಕದಲ್ಲಿ ಅಲ್ಲಲ್ಲಿ ಕಾಣಸಿಗುವ ಚೌಕಟ್ಟಿನೊಳಗಿನ ವಿಷಯಗಳು (ಬಾಕ್ಸ್ ಐಟಂ – ಅನೇಕ ವ್ಯಕ್ತಿಗಳ ಹೇಳಿಕೆಗಳು, ಪೂರಕ ಮಾಹಿತಿ ಇತ್ಯಾದಿ) ಇನ್ನಷ್ಟು ಒಪ್ಪವಾಗಿ ಜೋಡಣೆಗೊಂಡಿದ್ದರೆ, ಓದಿನ ಅನುಭವ ಮತ್ತಷ್ಟು ಖುಷಿದಾಯಕವಾಗುತ್ತಿತ್ತು.

ಹಳ್ಳಿಗಳ ಕಟ್ಟೋಣದ ಸುದೀರ್ಘ ಪಯಣದ ಅನುಭವಗಳನ್ನು ಪ್ರಸ್ತಾವಿಸುತ್ತಾ, 'ನಾವೂ ಜೊತೆಜೊತೆಯಲ್ಲಿಯೇ ಸಾಮಾಜಿಕ ಸಂಘಟನೆಯ ಪಾಠ ಕಲಿತೆವು. ಅಂಬೆಗಾಲಿಕ್ಕು ನಡೆದು, ಎಡವಿ ಎದ್ದು ಕಲಿತೆವು' ಎಂದಿದ್ದಾರೆ ಪ್ರಕಾಶ ಭಟ್. ಜೊತೆಗೇ ಈ ದಾರಿಯಲ್ಲಿ ತಮ್ಮ ಪತ್ನಿ ಸುನಂದಾರ ಸಹಯೋಗವನ್ನೂ ನೆನಪಿಸಿಕೊಂಡಿದ್ದಾರೆ. ಇದು ಅವರ ಜೀವನಕೃಷಿಗೂ, ಸಾಹಿತ್ಯಕೃತಿಗೂ ಒಂದು ವಿನೀತಭಾವ ಹಾಗೂ ಘನತೆಯನ್ನು ನೀಡಿದೆ. ತಾವು ಮಾಡಿದ ಸಂಘಟನೆಯಿಂದ ಹಳ್ಳಿಗಳ ಮೇಲಾದ ಪರಿಣಾಮವೇನು ಎಂಬ ಪ್ರಶ್ನೆಯನ್ನು ಕೇಳಿದಾಗ ಜನರಿಂದ ದೊರಕಿದ ಉತ್ತರಗಳು ಗಮನಾರ್ಹವಾಗಿವೆ. 'ಮೊದಲು ಹೊಲದಲ್ಲಿ ಏನೂ ಕೆಲಸ ಇರಲಿಲ್ಲ, ಈಗ ಹೊಲ ಬಿಟ್ಟು ಬರಲಿಕ್ಕಾಗೊಲ್ಲ' ಎಂದು ರೈತನೊಬ್ಬ ಹೇಳಿದರೆ; 'ಪ್ರತಿವಾರ ಮೀಟಿಂಗಿನಲ್ಲಿ ಭಾಗಿಯಾಗಲು ಮನೆ ಬಿಟ್ಟು ಹೊರಬಿಳುವಂತಾದದ್ದು ಬಹು ದೊಡ್ಡ ಪ್ರಯೋಜನ' ಎಂದು ಗ್ರಹಿಣಿಯೊಬ್ಬಳು ಹೇಳುತ್ತಾಳೆ. ಇವೆಲ್ಲ, ಗ್ರಾಮೋದ್ಧಾರದ ವೃತ್ತಿಯನ್ನು ಆಯ್ದುಕೊಂಡವನ ಸಾರ್ಥಕ್ಯದ ಕ್ಷಣಗಳಲ್ಲದೇ ಮತ್ತೇನಲ್ಲ.

'ಹಳ್ಳಿಗಳನ್ನು ಕಟ್ಟುವ ಕಷ್ಟ ಸುಖ' ಎನ್ನುವ ಶೀರ್ಷಿಕೆಯ ಈ ಪುಸ್ತಕದಲ್ಲಿ ಎಲ್ಲಿಯೂ ನಮಗೆ ಸುಖದ ಕ್ಷಣಗಳು ಎದುರಾಗುವುದಿಲ್ಲ. ಹಾಗಾದರೆ ಈ ಪಯಣದಲ್ಲಿ ಸುಖವೆಂಬುದೆಲ್ಲಿದೆ? ಎನ್ನುವ ಪ್ರಶ್ನೆ ಎದುರಾದರೆ, ಆ ಕ್ಷಣಕ್ಕೆ ನನಗೆ ನೆನಪಾಗುವುದು ಹನೀಫ್ ಕುರೇಶಿಯ 'Something to tell you' ಎನ್ನುವ ಕಾದಂಬರಿ. ಕಾಮ, ಪ್ರೇಮ, ಸ್ನೇಹ, ಪಾಪಪ್ರಜ್ಞೆ, ಸ್ವಾರ್ಥ, ಕ್ರೌರ್ಯ... ಹೀಗೆ ಮನುಷ್ಯ ಜೀವನದ ಪ್ರತಿ ತುಮುಲವನ್ನೂ ಸಮಗ್ರವಾಗಿ ಹಿಡಿದುಕೊಡುವ ಈ ಕಾದಂಬರಿ, ಕೊನೆಗೂ ಆ something ಏನು ಎನ್ನುವುದನ್ನು ಹೇಳದೆಯೇ ಮುಗಿದುಹೋಗುತ್ತದೆ. ಹಾಗೇ, ಆ something ಅನ್ನುವುದು ಏನೆಂದು ಹೇಳದಿರುವುದರಲ್ಲಿಯೇ ಆ ಕೃತಿಯ ಹೆಗ್ಗಳಿಕೆಯೂ ಅಡಗಿದೆ. ಯಾಕೆಂದರೆ ಅದು ಅಂತರ್ವಾಹಿನಿಯಾಗಿ ಅನುಭವಕ್ಕೆ ಮಾತ್ರ ದಕ್ಕುವಂಥದ್ದು. ಹಳ್ಳಿಗಳನ್ನು ಕಟ್ಟುವಲ್ಲಿಯ 'ಸುಖ'ವೂ ಅದೇ ರೀತಿಯದು.

●




**ಹಳ್ಳಿಗಳನ್ನು ಕಟ್ಟುವ ಕಷ್ಟ ಸುಖ**
**ಲೇ:** ಡಾ. ಪ್ರಕಾಶ ಭಟ್
**ಪು:** 280; **ಬೆ:** 300
**ಪ್ರ:** ಬಹುರೂಪಿ, ಬೆಂಗಳೂರು.
**ಫೋನ್:** 7019182729